ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ರಾ. ಹೆ. – ೦೪ "ವಿದ್ಯಾಸಂಗಮ" – ಬೆಳಗಾವಿ – ೫೯೧೧೫೬

ಪರೀಕ್ಷಾ ವಿಭಾಗ

RANI CHANNAMMA UNIVERSITY,

N.H. - 04 "VIDYASANGAMA"- BELAGAVI - 591156

"EXAMINATION SECTION"

Web Site: www. rcub.ac.in E-mail: rcuexam@gmail.com


Ref No: ರಾಚವಿ/ಪರೀಕ್ಷಾ ವಿಭಾಗ/ಬೆಳಗಾವಿ/2019-20/ 2811 Date: 12/09/2019

## ಗೌಪ್ಯ ಆದೇಶ

**ವಿಷಯ: ಸ್ನಾತಕ ಪ್ರಾಣಿಶಾಸ್ತ್ರ ವಿಭಾಗದ ಪರೀಕ್ಷಾ ಮಂಡಳಿಗೆ ಅಧ್ಯಕ್ಷ/ಸದಸ್ಯರಾಗಿ ನೇಮಕ ಮಾಡಿರುವ ಕುರಿತು.**

**ಉಲ್ಲೇಖ1) ದಿನಾಂಕ 27/08/2019 ರಂದು ನಡೆದ ಪರೀಕ್ಷಕರ ನೇಮಕಾತಿ ಮಂಡಳಿ ಸಭೆ ನಿರ್ಣಯ.**

**2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 27/08/2019.**

| ಅ.ನಂ. | ಪರೀಕ್ಷಕರ ಹೆಸರು | ಮಹಾವಿದ್ಯಾಲಯದ ಹೆಸರು | ಹುದ್ದೆ |
|---|---|---|---|
| 1 | ಶ್ರೀ ಎಮ್.ಜಿ. ಗೋಡೆಸವಾರ | ಅಂಜುಮನ್ ಮಹಾವಿದ್ಯಾಲಯ ವಿಜಯಪೂರ | ಅಧ್ಯಕ್ಷರು |
| 2 | ಶ್ರೀ ಎ.ಎ.ಹಲಗೇಕರ | ಜಿ.ಎಸ್.ಎಸ್. ವಿಜ್ಞಾನ ಮಹಾವಿದ್ಯಾಲಯ ಬೆಳಗಾವಿ | ಸದಸ್ಯರು |
| 3 | ಶ್ರೀ ಡಿ.ಎಮ್.ಪಾಟೀಲ | ಜಿ.ಪಿ.ಪೋರ್ವಾಲ ಮಹಾವಿದ್ಯಾಲಯ ಸಿಂದಗಿ | ಸದಸ್ಯರು |
| 4 | ಶ್ರೀ ಆರ್.ಜಿ.ವಸ್ತ್ರದ | ಎಮ್.ಜಿ.ವಿ.ಸಿ. ಮಹಾವಿದ್ಯಾಲಯ ಮುದ್ದೇಬಿಹಾಳ | ಸದಸ್ಯರು |
| 5 | ಪ್ರೊ.ಬಿ.ಎಸ್.ಬಗಲಿ | ಎಸ್.ಬಿ.ಕಲಾ & ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪೂರ | ಸದಸ್ಯರು |
| 6 | ಶ್ರೀ ಎಸ್.ಆರ್. ಶೆಟ್ಟಿ | ಎಸ್.ವಿ.ಎಮ್.ಮಹಾವಿದ್ಯಾಲಯ ಇಳಕಲ್ | ಸದಸ್ಯರು |
| 7 | ಶ್ರೀ ಜಿ.ಎಮ್.ಮೇಟಿ | ಎಸ.ಬಿ.ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪೂರ | ಸದಸ್ಯರು |

1) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ (36) ರನ್ವಯ ತಮ್ಮನ್ನು 2018-19ನೇ ಶೈಕ್ಷಣಿಕ ಸಾಲಿನಲ್ಲಿ ಜರುಗುವ ಸ್ನಾತಕ (U.G) ಪರೀಕ್ಷೆಗಳಿಗೆ ಸಂಬಂಧಿಸಿದಂತೆ ತಮ್ಮನ್ನು **ಪ್ರಾಣಿಶಾಸ್ತ್ರ/ಪರಿಸರ ಅಧ್ಯಯನ** ವಿಭಾಗದ ಪರೀಕ್ಷಾ ಮಂಡಳಿಯ ಅಧ್ಯಕ್ಷ/ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

2) ಸರ್ಕಾರದ ಆದೇಶ ಸಂಖ್ಯೆ ಇಡಿ 1000 ಯು ಎನ್ ಇ 2000 ದಿ 08-08-2000 ಮತ್ತು ಕರ್ನಾಟಕ ಶಿಕ್ಷಣ ಮಸೂದೆ 1983 ಸೆಕ್ಷನ್ 28 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಅಧಿನಿಯಮ 73(01)ರನ್ವಯ ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸ ತಕ್ಕದ್ದು.

3) ಈ ಪತ್ರದ ವಿಷಯ ರಹಸ್ಯವಾಗಿರಲಿ. ಪರೀಕ್ಷಾ ಪ್ರಶ್ನೆ ಪತ್ರಿಕೆಯ ಗೌಪ್ಯತೆಯನ್ನು ಕಾಪಾಡುವ ಸಂಪೂರ್ಣ ಜವಾಬ್ದಾರಿಯು ಪರೀಕ್ಷಾ ಮಂಡಳಿಯದಾಗಿರುತ್ತದೆ. ಹೀಗಾಗಿ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಪತ್ರಗಳನ್ನು ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿಗೆ ಮಾತ್ರ ಕಳುಹಿಸಲು ತಿಳಿಸಲಾಗಿದೆ.

4) ತಾವು ಖಾಸಗಿ ಪಾಠ ಮಾಡುತ್ತಿದ್ದರೆ ಅಥವಾ ತಮ್ಮ ಸಂಬಂಧಿಕರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾವು ಬೋಧಿಸುವ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದಲ್ಲಿ ಮಾತ್ರ ಈ ನೇಮಕಾತಿ ಅಸಿಂಧುವಾಗುತ್ತದೆ. ತಾವು ಖಾಸಗಿಯಾಗಿ ಪಾಠ ಮಾಡುತ್ತಿದ್ದರೆ ಹಾಗೂ ತಮ್ಮ ಸಂಬಂಧಿಕರು ರಾಚವಿದಲ್ಲಿ ತಾವು ಬೋಧಿಸುತ್ತಿರುವ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದರೆ ಅದರ ಸಂಪೂರ್ಣ ವಿವರವನ್ನು ಕುಲಸಚಿವರು (ಮೌಲ್ಯಮಾಪನ) ಇವರಿಗೆ ತಲುಪುವಂತೆ ಕಳುಹಿಸಲು ಕೋರಿದೆ.

5) ಪರೀಕ್ಷೆ ಮಂಡಳಿಯ ಅಧ್ಯಕ್ಷರಾದ ತಾವು ಪ್ರಶ್ನೆ ಪತ್ರಿಕೆ ತಯಾರಕರ ಪಟ್ಟಿಯನ್ನು ತಯಾರಿಸಿ ಅವರಿಗೆ ಪ್ರಶ್ನೆಪತ್ರಿಕೆಗಳನ್ನು ನಿಗದಿತ ದಿನಾಂಕದಲ್ಲಿ ತಯಾರಿಸಲು ಸೂಚಿಸುವುದು .

6) **ಪರೀಕ್ಷಾ ಮಂಡಳಿಯ ಅಧ್ಯಕ್ಷರಾದ ತಾವು ದಿನಾಂಕ :24/09/2019 ರಿಂದ 30/09/2019 ರೊಳಗೆ ಪರೀಕ್ಷಕ ಮಂಡಳಿಯ ಸಭೆಯನ್ನು ಕರೆದು 1, 3 ಹಾಗೂ 5 ನೇ ಸೆಮಿಸ್ಟರನ ಪ್ರಶ್ನೆ ಪತ್ರಿಕೆಗಳನ್ನು ಅಂತಿಮಗೊಳಿಸುವುದು. ಇದರ ನಂತರ ದಿನಾಂಕ ವಿಸ್ತರಿಸುವದಿಲ್ಲ.**

7) ಪರೀಕ್ಷಾ ಮಂಡಳಿಯ ಸಭೆಗೆ ಪರೀಕ್ಷಕ ಮಂಡಳಿಯ ಎಲ್ಲಾ ಸದಸ್ಯರು ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಮಂಡಳಿಯ ಅಧ್ಯಕ್ಷರದ್ದಾಗಿರುತ್ತದೆ. ಸಕಾರಣವಿಲ್ಲದೆ ಹಾಜರಾಗದ ಸದಸ್ಯರ ವಿವರಗಳನ್ನು ಅಧ್ಯಕ್ಷರು ಕುಲಸಚಿವರು(ಮೌಲ್ಯಮಾಪನ) ಇವರಿಗೆ ನೀಡುವದು.

8) ಪರೀಕ್ಷಕ ಮಂಡಳಿಯ (ಬಿ.ಓ.ಇ) ಸಭೆಯನ್ನು ನಿಗದಿತ ದಿನಾಂಕದೊಳಗೆ ನಡೆಸುವುದು ಮತ್ತು ಕೇವಲ ಒಂದು ಅಥವಾ ಎರಡು ದಿನಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಅಂತಿಮಗೊಳಿಸುವುದು ಹಾಗೂ ನಿಗದಿಪಡಿಸಿದ ಸ್ಥಳಗಳಲ್ಲಿ ಪ್ರಶ್ನೆಪತ್ರಿಕೆಯ ಅಂಕಗಳು, ವಿಷಯ ಕೋಡ ನಂಬರ್ ಹಾಗೂ ಪಠ್ಯಪುಸ್ತಕದ ಹೆಸರು ಸರಿಯಾಗಿ ನಮೂದಿಸುವುದು ಮತ್ತು ಪರೀಕ್ಷಾ ಮಂಡಳಿಯು ಇವುಗಳನ್ನು ಪರಿಶೀಲಿಸಿ ಕುಲಸಚಿವರು(ಮೌಲ್ಯಮಾಪನ) ಇವರಿಗೆ ಸಭೆಯ ನಡಾವಳಿಗಳೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

9) **ಈ ಸಭೆಗೆ ಹಾಜರಾಗುವ ಸದಸ್ಯರಿಗೆ ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ಪ್ರಯಾಣ ಭತ್ಯೆ/ ದಿನ ಭತ್ಯೆ/ ಸಂಭಾವನೆಗಳನ್ನು ನೀಡಲಾಗುವುದು. ಬಿಲ್‌ಗಳನ್ನು ಸಲ್ಲಿಸುವಾಗ ಖಾತೆ ಪುಸ್ತಕ, ಪ್ಯಾನ ಕಾರ್ಡ ಹಾಗೂ ಆದೇಶ ಪತ್ರದ ಝರಾಕ್ಸ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಇಲ್ಲದೇ ಹೋದಲ್ಲಿ ಬಿಲ್‌ಗಳನ್ನು ಸ್ವೀಕರಿಸಲಾಗುವದಿಲ್ಲ.**

10) ಎಲ್ಲ ಪ್ರಶ್ನೆಪತ್ರಿಕೆಗಳನ್ನು ನಿಗದಿತ ಪಠ್ಯಕ್ರಮ ಹಾಗೂ ಪ್ರಶ್ನೆಪತ್ರಿಕೆ ಮಾದರಿಗೆ ಅನುಸಾರವಾಗಿ (RCU Repeater/Regular) 02 ಸೆಟ್‌ಗಳಲ್ಲಿ ತಯಾರಿಸುವುದು. ಪ್ರಶ್ನೆಗಳು ಪುನರಾವರ್ತನೆಯಾಗದಂತೆ, ಎರಡು ಸೆಟ್‌ಗಳಲ್ಲೂ ಪ್ರಶ್ನೆಗಳು ಬೇರೆ ಬೇರೆಯಾಗಿರುವಂತೆ ಎಚ್ಚರ ವಹಿಸುವುದು. ಮತ್ತು ಪ್ರಶ್ನೆಪತ್ರಿಕೆಗಳ ಮಾದರಿ ಉತ್ತರಗಳನ್ನು (Scheme of Evaluation) ಕಡ್ಡಾಯವಾಗಿ ಸಲ್ಲಿಸುವದು.

ಕುಲಸಚಿವರು (ಮೌಲ್ಯಮಾಪನ)

IQAC, Co-ordinator
S.B.Arts & K.C.P.Science College,
Vijayapur.

Principal,
S.B. Arts and KCP Science College
VIJAYAPUR